ಓ.ಎಸ್.111/2023 ಪಿ.ಡಬ್ಲು-3
*ಸಿದ್ದಪ್ಪ ತಂದೆ ಬಸಪ್ಪ*

ದಿ.10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್.ಬಿ ವಕೀಲರಿಂದ :-**

ನಾನು ಮೂಲತ: ಕಸಬಾಲಿಂಗಸುಗೂರಿನವನು. ನಾನು ಕಸಬಾಲಿಂಗಸುಗೂರಿನಲ್ಲಿ ವಾಸವಾಗಿರುತ್ತೇನೆ. ನಾನು ಸಮಾಜ ಸೇವೆ ಮಾಡುತ್ತೇನೆ. ವಾದಿ ಮತ್ತು ಪ್ರತಿವಾದಿಯರು ಪರಿಚಯ. ವಾದಿ ಮತ್ತು ಪ್ರತಿವಾದಿಯರು ಒಂದೆ ಸಮಾಜದವರು. ಸಂಬಂಧಿಕರಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆಗಳು ಬೇರೆ-ಬೇರೆ ಇದ್ದು ಒಂದೆ ಓಣಿಯಲ್ಲಿರುತ್ತವೆ. ಕಸಬಾಲಿಂಗಸುಗೂರಿನಲ್ಲಿ ವಾದಿ-ಪ್ರತಿವಾದಿಯರ ಮನೆ ಮತ್ತು ನಮ್ಮ ಮನೆ ಬೇರೆ-ಬೇರೆ ಓಣಿಯಲ್ಲಿರುತ್ತವೆ ಎಂದರೆ ಸರಿ. ದಾವಾ ಆಸ್ತಿ ಮೂಲ ಸಿದ್ದಲಿಂಗೇಶ್ವರಗೌಡ ರವರದ್ದಾಗಿರುತ್ತದೆ. ಸಿದ್ದಲಿಂಗೇಶ್ವರಗೌಡ ಅವರ ಮನೆತನದ ಆಸ್ತಿಯಾಗಿರುತ್ತದೆ. ಅವರ ಮನೆತನಕ್ಕೆ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ. ಸಿದ್ದಲಿಂಗೇಶ್ವರಗೌಡರ ಮನೆತನದ ಆಸ್ತಿ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಮೊದಲಿನಿಂದಲೂ ಅವರ ಆಸ್ತಿ ಖಾಲಿ ಜಾಗ ಇರುವದರಿಂದ ಗಾಂವ್ ಠಾಣಾ ಜಾಗ ಆಗಿರುವುದರಿಂದ ಅವರದೇ ಎಂದು ಹೇಳುತ್ತಿದ್ದೇನೆ. ಸಿದ್ದಲಿಂಗೇಶ್ವರಗೌಡರು 8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರಿಗೆ ಒಬ್ಬ ಮಗ ಮತ್ತು 4 ಜನ ಹೆಣ್ಣುಮಕ್ಕಳು ಇರಬಹುದು.

2. ದಾವಾ ಆಸ್ತಿಯ ನಂ.3-2-140/1, ಪೂರ್ವ-ಪಶ್ಚಿಮ 18 ಮೀಟರ್, ಉತ್ತರ-ದಕ್ಷಿಣ 6 ಮೀಟರ್ ಇರುತ್ತದೆ. ಸಿದ್ದಲಿಂಗೇಶ್ವರಗೌಡರ ಮಗನಿಗೆ ಪೋತಿ ವಿರಾಸತ್ ಆದಾರದ ಮೇಲೆ ದಾವಾ ಆಸ್ತಿ ಬಂದಿರುತ್ತದೆ. ಅದು ಕೇವಲ ಮಗ ಅಮರೇಶ ಪಾಟೀಲ ರವರ ಹೆಸರಿನಲ್ಲಿ ಮಾತ್ರ ವರ್ಗಾವಣೆ ಆಗಿರತ್ತದೆ. ಆಸ್ತಿ ನಂ.3-2-140 ಮೂಲತ: ವಿಸ್ತೀರ್ಣ ಹೆಚ್ಚಿಗೆ ಇದ್ದು ಅದರಲ್ಲಿ ಜಾಗವನ್ನು ಕುಪ್ಪಣ್ಣ ಎನ್ನುವವರು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿ ಎಷ್ಟು ಹೆಚ್ಚಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಕುಪ್ಪಣ್ಣನಿಗೆ ಮತ್ತು ವಾದಿ ದೊಡ್ಡ ಬಸಪ್ಪಿಗೆ ಖರೀದಿ ಪತ್ರಗಳು ಒಂದೆ ದಿನ ಆಗಿರುತ್ತವೆ. ಅಮರೆಶಗೌಡ ರವರು ಒಂದೆ ಆಸ್ತಿಯನ್ನು ಇಬ್ಬರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿ ಮಲ್ಲಪ್ಪ ಮತ್ತು ಮಂಜುನಾಥ ರವರ ಕುಟುಂಬದ ಆಸ್ತಿ ನಂ.3-2-134/1 ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ ಮತ್ತು ಅಮರಪ್ಪ ತಂದೆ ದೊಡ್ಡಬಸಪ್ಪ ರವರ ಮನೆ ಇದೆ, ಪಶ್ಚಿಮಕ್ಕೆ ಕುಪ್ಪಣ್ಣ ತಲೆಒಡಕರ ರವರ ಜಾಗ ಇದೆ, ಉತ್ತರಕ್ಕೆ ಇದೇ ನಂಬರಿನಲ್ಲಿ ಕುಪ್ಪಣ್ಣ ಖರಿದಿಸಿದ

ಜಾಗ ಇರುತ್ತದೆ. ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿ ಖಾಲಿ ಜಾಗ ಇದೆ ಎಂದರೆ ಸರಿ. ದಾವಾ ಆಸ್ತಿ ಸುತ್ತ-ಮುತ್ತಲೂ ಪ್ರತಿವಾದಿಯರ ಆಸ್ತಿ ಇದೆಯೋ ಇಲ್ಲವೋ ಎನ್ನುವ ಪ್ರಶ್ನೆಗೆ ಇರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯರ ಆಸ್ತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಉ ಪೂರ್ವಕ್ಕೆ ಮೊದಲಿನಿಂದಲೂ ಬಣಿವೆ ಹಾಕುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅದು ದಾವಾ ಆಸ್ತಿ ಖರಿದಿ ಪತ್ರದ ಆದಾರದ ಮೇಲೆ ವಾದಿಯದು ಎಂದು ಹೇಳುತ್ತಿದ್ದೇನೆ. ಸಿದ್ದಲಿಂಗೇಶ್ವರಗೌಡ ರವರಿಗೆ ಮೂಲತ: ಖಾತಾ ಉತಾರದ ಆದಾರದ ಮೇಲೆ ದಾವಾ ಆಸ್ತಿ ಇತ್ತು ಎಂದು ನಾನು ನೋಡಿರುತ್ತೇನೆ. ಸಿದ್ದಲಿಂಗೇಶ್ವರಗೌಡರು ರಅಜಕೀಯ ಮುಖಂಡರು ಇದ್ದರು ಎಂದರೆ ಸರಿಯಲ್ಲ. ಅವರು ಒಕ್ಕಲುತನ ಮಾಡುತ್ತಿದ್ದರು. ಸಿದ್ದಲಿಂಗೇಶ್ವರಗೌಡರು ಪುರಸಭೆಯಲ್ಲಿ ಕಾನೂನು ಬಾಹಿರವಾಗಿ ತನ್ನ ಹೆಸರನ್ನು ದಾವಾ ಆಸ್ತಿಗೆ ಹಚ್ಚಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತ: ಸಿದ್ದಲಿಂಗೇಶ್ವರಗೌಡರಿಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಾದಿ ಇಲೆಕ್ಟ್ರಿಷಿಯನ್ ಕೆಲಸ ಬೆಂಗಳೂರಿನಲ್ಲಿ ಮಾಡುತ್ತಿದ್ದಾನೆ. ಈಗಲೂ ಸಹ ಆತ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ಇರುತ್ತಾರೆ. ವಾದಿ ಬೆಂಗಳೂರಿಗೆ ಹೋದಾಗ ಪ್ರತಿವಾದಿಯರು ಅತಿಕ್ರಮ ಮಾಡಿ ಬಣಿವೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಣಿವೆ ಹಾಕಿದ ಜಾಗ ಪ್ರತಿವಾದಿಗೆ ಸಂಬಂಧಿಸಿದ್ದು ಅದು ದಾವಾ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ವಾದಿಗೂ ಆತ್ಮೀಯತೆ ಇರುವದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.